ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

" ಅಭಿವೃದ್ಧಿ ಭವನ " ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಯೋಜನೆ/ಮ್ಯಾಕ್ರೋ/ಸಾಮನ್ಯ/46/2017-18 1298 ದಿನಾಂಕ: 13-09-2017 14

**-: ಸುತ್ತೋಲೆ:-**

ವಿಷಯ:- 2017-18 ನೇ ಸಾಲಿಗೆ ಹೈ.ಕ.ಪ್ರ.ಅ.ಮಂಡಳಿಯಿಂದ **"ನಮ್ಮ ಹೊಲ ನಮ್ಮ ದಾರಿ" ಯೋಜನೆಯ ಆಂದೋಲನ ರೂಪದಲ್ಲಿ** ಅನಷ್ಠಾನ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/174/ಆರ್‌ಆರ್‌ಸಿ/2017, ಬೆಂಗಳೂರು, ದಿನಾಂಕ: 20-06-2017

2) ಮಂಡಳಿಯ ಪತ್ರ ಸಂಖ್ಯೆ: ಹೈ.ಕ.ಪ್ರ.ಅ.ಮಂ./ಯೋಶಾ/ಕ್ರಿಯೋ/ಸಾಮನ್ಯ/46/ 2017-18/ 1146, ದಿನಾಂಕ: 11-08-2017

*****

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಾಜ್ಯದಲ್ಲಿ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 6615 ಕಿ.ಮೀ. ಉದ್ದದ ಹೊಲಗಳಿಗೆ ಹೋಗುವ ಮಣ್ಣಿನ ರಸ್ತೆಗಳನ್ನು ಆದ್ಯತೆಯನ್ನಾಧರಿಸಿ ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಪ್ರತಿ ಕಿ.ಮೀ.ಗೆ ಅಂದಾಜು ರೂ. 1.50 ಲಕ್ಷಗಳಂತೆ "ನಮ್ಮ ಹೊಲ ನಮ್ಮ ದಾರಿ" ಯೋಜನೆಯಡಿಯಲ್ಲಿ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರಕ್ಕೆ 35 ಕಿ.ಮೀ ನಂತೆ ಹೊಲಗಳಿಗೆ ಹೋಗುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಮಂಜೂರಾತಿ ನೀಡಲಾಗಿರುತ್ತದೆ ಎಂದು ಉಲ್ಲೇಖ(1) ರಲ್ಲಿ ತಿಳಿಸಲಾಗಿರುತ್ತದೆ. ಆದರೆ ಈ ನಿಗಧಿಪಡಿಸಿದ ಗುರಿಯಿಂದ ಎಲ್ಲಾ ಹಳ್ಳಿಗಳಲ್ಲಿ ಹೊಲಗಳಿಗೆ ಹೋಗುವ ಎಲ್ಲಾ ರಸ್ತೆಗಳನ್ನು ಅಭಿವೃಧಿಗೆ ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಮಂಡಳಿ ವತಿಯಿಂದ ಈ ಯೋಜನೆಗೆ ಪೂರಕವಾಗಿ ಹೆಚ್ಚುವರಿ ರಸ್ತೆಗಳ ಅಭಿವೃಧಿ ಕೈಗೊಂಡು "ನಮ್ಮ ಹೊಲ ನಮ್ಮ ದಾರಿ" ಯೋಜನೆಯನ್ನು ಹೈದ್ರಬಾದ ಕರ್ನಾಟಕ ಭಾಗದಲ್ಲಿ ಆಂದೋಲನ ರೂಪದಲ್ಲಿ ಕೈಗೊಳ್ಳಲು ಹಾಗೂ ಸಂಪೂರ್ಣವಾಗಿ ಎಲ್ಲಾ ಹಳ್ಳಿಗಳ ಹೊಲಗಳಿಗೆ ಹೋಗುವ ಎಲ್ಲಾ ರಸ್ತೆಗಳನ್ನು ಅಭಿವೃಧಿ ಪಡಿಸಲು ಯೋಜಿಸಲಾಗಿದೆ. ಈ ನಿಟ್ಟಿನಲ್ಲಿ ಪ್ರಥಮ ಹಂತದಲ್ಲಿ ಮಂಡಳಿ ವತಿಯಿಂದ ಪ್ರತಿ ತಾಲೂಕಿಗೆ 35 ಕಿ.ಮೀ. ಹೆಚ್ಚುವರಿಯಾಗಿ ಹೊಲಗಳಿಗೆ ಹೋಗುವ ರಸ್ತೆಗಳನ್ನು ಅಭಿವೃಧಿ ಪಡಿಸಲು 2017-18ನೇ ಸಾಲಿನ ಮ್ಯಾಕ್ರೋ ಯೋಜನೆ ಅಡಿಯಲ್ಲಿ ಅನುದಾನ ನಿಗಧಿಪಡಿಸಲಾಗಿದೆ. ಮಂಡಳಿ ವತಿಯಿಂದ ಪ್ರಾಯೋಜಿತ ಹೊಲಗಳಿಗೆ ಹೋಗುವ ರಸ್ತೆಗಳನ್ನು ಸರ್ಕಾರದ "ನಮ್ಮ ಹೊಲ ನಮ್ಮ ದಾರಿ" ಯೋಜನೆಯ ಉಲ್ಲೇಖ(1)ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳಂತೆಯೇ ಅನುಷ್ಠಾನಗೊಳಿಸತಕ್ಕದ್ದು. ಆದರೆ ಈ ಹೆಚ್ಚುವರಿ 35 ಕಿ.ಮೀ. ಹೊಲಗಳಿಗೆ ಹೋಗುವ ರಸ್ತೆಗಳನ್ನು ಈ ಕೆಳಕಂಡ ವಿಧಾನದಂತೆ ಆಯ್ಕೆ ಮಾಡತಕ್ಕದ್ದು:

1) ತಾಲೂಕಿನ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮಗಳನ್ನು ಅನುಕ್ರಮವಾಗಿ ಏರಿಕೆ ಕ್ರಮದಲ್ಲಿ ಪಟ್ಟಿಮಾಡುವುದು ಹಾಗೂ ಸದರಿ ಪಟ್ಟಿಯಲ್ಲಿನ ಮೇಲಿನ ಗ್ರಾಮಗಳಲ್ಲಿ ಬೇಕಾಗಿರುವ ಹೊಲಗಳಿಗೆ ಹೋಗುವ ಎಲ್ಲಾ ರಸ್ತೆಗಳನ್ನು ತೆಗೆದುಕೊಳ್ಳುವುದು. ಈ ರೀತಿ 35 ಕಿ.ಮೀ ರಷ್ಟು ರಸ್ತೆ ಆಗುವವರೆಗೆ ಪಟ್ಟಿಯಲ್ಲಿನ ಮೇಲಿನ ಗ್ರಾಮಗಳನ್ನು ಆಯ್ಕೆ ಮಾಡುವುದು.

2) ರೈತರ ಹೊಲಗಳಿಗೆ ಹೋಗುವ ರಸ್ತೆಗಳನ್ನು ಗುರುತಿಸಿ ನಿಗಧಿತ ನಮೂನೆಯಲ್ಲಿ ಮಾಹಿತಿ ಸಲ್ಲಿಸಲು ಉಲ್ಲೇಖ(2) ರಲ್ಲಿ ಎಲ್ಲಾ ತಹಶೀಲ್ದಾರರಿಗೆ ಈಗಾಗಲೇ ತಿಳಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳು ಮೇಲಿನ ವಿಧಾನದಂತೆ 35 ಕಿ.ಮೀ ರಷ್ಟು ರಸ್ತೆಗಳ ಗ್ರಾಮವಾರು ಪಟ್ಟಿಯನ್ನು ತಹಶೀಲ್ದಾರರಿಂದ ಪಡೆದುಕೊಂಡು ಅನುಮೋದನೆಗಾಗಿ ಮಂಡಳಿಗೆ ಸಲ್ಲಿಸುವುದು.

14/9/17

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ

**ಇವರಿಗೆ,**

1) ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ.ವಿಭಾಗ,
2) ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹೈ.ಕ.ವಿಭಾಗ
3) ಎಲ್ಲಾ ಅನುಷ್ಠಾನ ಅಧಿಕಾರಿಗಳು, ಹೈ.ಕ.ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.